# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 931 |
| ಮಾನ್ಯ ಸದಸ್ಯರ ಹೆಸರು | : | ಶ್ರೀಮತಿ ಹೇಮಲತಾ ನಾಯಕ್ |
| ಉತ್ತರಿಸುವ ದಿನಾಂಕ | : | 23-02-2024 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಮಾದಿಗ ಸಮಾಜದಲ್ಲಿ ಎಷ್ಟು ಒಳ ಪಂಗಡಗಳಿವೆ; (ವಿವರ ನೀಡುವುದು) | ಸಂವಿಧಾನ ಅನುಚ್ಛೇದ 341 (1) ರಂತೆ, ಭಾರತ ಸರ್ಕಾರದಿಂದ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ, ಒಟ್ಟು 101 ಜಾತಿಗಳನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಸದರಿ ಪಟ್ಟಿಯಲ್ಲಿ ಮಾದಿಗ ಸಮುದಾಯ ಸದರಿ ಪಟ್ಟಿಯಲ್ಲಿರುತ್ತದೆ. ಆದರೆ, ಭಾರತ ಸರ್ಕಾರದ ಅಧಿಸೂಚನೆಯಲ್ಲಿ ಮಾದಿಗ ಸಮುದಾಯದ ಒಳಪಂಗಡಗಳೆಂದು ವಿಭಜಿಸಿರುವುದಿಲ್ಲ. |
| ಆ) | ಮಾದಿಗ ಸಮುದಾಯದ ಒಳ ಪಂಗಡವಾಗಿರುವ "ಮಾದಿಗ ದಾಸರಿ" ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸದಿರಲು ಕಾರಣವೇನು; ಯಾವಾಗ ಸೇರಿಸಲಾಗುವುದು; (ವಿವರ ನೀಡುವುದು) | ಮಾದಿಗ ದಾಸರಿ ಸಮುದಾಯ ಕರ್ನಾಟಕ ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿರುವುದಿಲ್ಲ.<br><br>ಯಾವುದೇ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸಬೇಕಾದಲ್ಲಿ ಭಾರತದ ಸಂಸತ್‌ಗೆ ಮಾತ್ರ ಅಧಿಕಾರವಿರುತ್ತದೆ. ರಾಜ್ಯ ಸರ್ಕಾರ ಯಾವುದೇ ಜಾತಿಯನ್ನು ಸೇರಿಸುವ ಕುರಿತು ಶಿಫಾರಸ್ಸು ಮಾಡಲು ಅವಕಾಶವಿರುತ್ತದೆ. ಸದರಿ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಸೇರಿಸುವ ಬಗ್ಗೆ ಮನವಿಗಳು ಸ್ವೀಕೃತವಾಗಿದ್ದು. ಅದರಂತೆ, ಸದರಿ ಸಮುದಾಯದ ಬಗ್ಗೆ ಹಂಪಿ ವಿಶ್ವವಿದ್ಯಾಯಲಯದ ಮಾನವ ಶಾಸ್ತ್ರ ತಜ್ಞರಿಂದ ಕುಲಶಾಸ್ತ್ರೀಯ ಅಧ್ಯಯನ ಮಾಡಲು ಆದೇಶ ನೀಡಿದ್ದು, ಪ್ರಸ್ತುತ ಸದರಿ ವಿಶ್ವವಿಧ್ಯಾಲಯದಿಂದ ಕುಲಶಾಸ್ತ್ರೀಯ ವರದಿಯನ್ನು ಸಲ್ಲಿಸಿದ್ದು, ಸದರಿ ವರದಿಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. |
| ಇ) | ಮಾದಿಗ ದಾಸರಿ ಸಮುದಾಯದ ಕುರಿತು ಕುಲಶಾಸ್ತ್ರೀಯ ಅಧ್ಯಯನ ನಡೆಸಲಾಗಿದೆಯೇ; ಈ ಕುರಿತು ವರದಿ ಸರ್ಕಾರದಲ್ಲಿ ಲಭ್ಯವಿದೆಯೇ? | |

**ಸಕಇ 86 ಎಸ್‌ಎಲ್‌ಪಿ 2024**

**(ಡಾ: ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಸಚಿವರು**